**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1069/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಎಂ. ಜಗದೀಶ್ | ಫ್ರಾಸಾ-5 |
| ತಂದೆಯ ಹೆಸರು | : ಮಹಾದೇವಯ್ಯ | ಚಾಸಾ-18 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಐ | ದಿನಾಂಕಃ 25.06.2026. |
| ವಾಸಸ್ಥಳ | : ಚಾಮರಾಜನಗರ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆ: ಪ್ರಾಭ್ಜ್ಯಾ.ಸ.ಸ.ಅ. ರವರಿಂದ:**

1. ನಾನು ದಿ.24.06.2015 ರಿಂದ ದಿ.25.02.2019 ರವರೆಗೂ ಮೂಡಿಗೆರೆ ಪೋಲಿಸ್ ವೃತ್ತದಲ್ಲಿ ಸಿ.ಪಿ.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಸಾಕ್ಷಿಯು ದಿ.01.09.2018 ರಂದು ಪ್ರಕರಣದ ಕಡತವನ್ನು ಫ್ರಾಸಾ-4 ರಾಮಚಂದ್ರ ರವರಿಂದ ಪಡೆದುಕೊಂಡಿರುತ್ತೇನೆ. ಅದೇದಿನ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿರುತ್ತೇನೆ. ಚಾಸಾ-8 ಮತ್ತು 9 ರವರ ಸಮಕ್ಷಮ ಬೆ.9.45 ರಿಂದ 11.45 ರವರೆಗೆ ಮಹಜರ್ ಕ್ರಮವನ್ನು ಜರುಗಿಸಿದ್ದು, ಅಲ್ಲಿ ಪೊಟೋ ತೆಗೆಸಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇನೆ. ಅದೇದಿನ ಚಾಸಾ-1 ರವರು ಹಾಜರುಪಡಿಸಿದ ಮದುವೆ ಫೋಟೋ ಮತ್ತು ನಿಖಾ ನಾಮವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಚಾಸಾ-8 ಮತ್ತು 9 ರವರ ಸಮಕ್ಷಮ ಅಮಾನತ್ತು ಮಹಜರ್ ನ್ನು ಠಾಣೆಯಲ್ಲಿ ಜರುಗಿಸಿರುತ್ತೇನೆ. ಅದಕ್ಕೆ ಸಂಬಂಧಪಟ್ಟಂತೆ ಮಾ.ಸಂ.124/2018 ರಂತೆ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ.

3. ಅದೇದಿನ ಫ್ರಾಸಾ-1 ವಹಿದಾ, ಫ್ರಾಸಾ-2 ಅಬ್ದುಲ್ಲಾ, ಚಾಸಾ-3 ರಹೀಮಾ ಮತ್ತು ಚಾಸಾ-5 ಮೊಹಮ್ಮದ್ ಹಿದಾಹಿತ್ ಉಲ್ಲಾ, ಚಾಸಾ-6 ಅಬ್ದುಲ್ ರಜಾಕ್, ಚಾಸಾ-4 ಉಮಾ ಅಭೀಬ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4. ದಿ.06.09.2018 ರಂದು ವಿವಾಹವಾದ ದಾಖಲಾತಿಯನ್ನು ಫ್ರಾಸಾ-1 ರವರಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಚಾಸಾ-13 ಪಿಡಿಒ ರವರಿಂದ ಆರೋಪಿ ಮನೆಯ ಖಾತಾ ಎಕ್ಸ್ಟ್ರಾಕ್ಟ್ ನ್ನು ಪಡೆದಿರುತ್ತೇನೆ.

5. ಮೂಡಿಗೆರೆ ವಿದ್ಯಾನಗರದ ಮಸೀದಿಯಲ್ಲಿ ವಿವಾದ ವಿಚಾರಣೆಯ ಸಂಬಂಧಪಟ್ಟ ದಾಖಲಾತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿರುತ್ತೇನೆ.

6. ದಿ.12.09.2018 ರಂದು ಫ್ರಾಸಾ-1 ರವರ ಮನೆ ಮಂಜಲಿ ಪಲಿಕೆಗೆ ಬೇಟಿ ನೀಡಿ ಚಾಸಾ-8 ಮತ್ತು 10 ರವರ ಸಮಕ್ಷಮ ಮ.12.30 ರಿಂದ 1.30 ರವರೆಗೂ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ.

7. ಅದೇದಿನ ಪುಂಜಾಲಕಟ್ಟೆ ಠಾಣೆಗೆ ಬೇಟಿ ನೀಡಿ NC.No.178/2018 ರ ಕಡತಗಳ ದೃಢೀಕೃತ ನಕಲುಗಳನ್ನು ಪಡೆದಿರುತ್ತೇನೆ.

8. ಚಾಸಾ-14 ಮಂಜುನಾಥ್ ರವರಿಂದ ಕ್ಯಾಮೆರಾದಿಂದ ಸಿಡಿಗೆ ಅಳವಡಿಸಿ ಸದರಿರವರಿಂದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ.

9. ದಿ.17.09.2018 ರಂದು ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಕಂಡುಬಂದ ಕಾರಣ ನ್ಯಾಯಾಲಯಕ್ಕೆ ದೋ.ಪ. ಸಲ್ಲಿಸಿಕೊಂಡಿರುತ್ತೇನೆ.

10. ಸಾಕ್ಷಿಯು ನಿಪಿ-3 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಿಪಿ-4 ಮತ್ತು 5 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

11. ಸಾಕ್ಷಿಯು ನಿಪಿ-6 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ನಿಪಿ-7 ಮತ್ತು 8 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

12. ಸಾಕ್ಷಿಯು ನಿಪಿ-9 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು. ನಿಪಿ-10 ಮತ್ತು 11 ರ ಫೋಟೋಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಅಮಾನತ್ತು ಸಮಯದಲ್ಲಿ ವಶಪಡಿಸಿಕೊಂಡು ನಿಪಿ-12 ಮತ್ತು 13 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

13. ಸಾಕ್ಷಿಯು ನಿಪಿ-15 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು.

14. ಸಾಕ್ಷಿಯು ದಿ.01.09.2018 ರಂದು ಸಾಂತ್ವಾನ ಮಹಿಳಾ ಕೇಂದ್ರದಿಂದ ಬಂದ ದಾಖಲಾತಿ ಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ-18, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

15. ಸಾಕ್ಷಿಯು ದಿ.01.09.2018 ರಂದು ಮಸೀದಿಯವರಿಗೆ ಕೊಟ್ಟ ಮನವಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ-19, ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

16. ದಿ.06.09.2018 ರಂದು ಮಸೀದಿರವರಿಂದ ಪಡೆದುಕೊಂಡ ಮದುವೆಯ ದೃಢೀಕರಣ ಪತ್ರದಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ-20, ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು.

17. ಸಾಕ್ಷಿಯು ದಿ.01.09.2018 ರಂದು ಮಸೀದಿಯವರಿಗೆ ಆರೋಪಿಯ ವಿವಾಹದ ಬಗ್ಗೆ ಮನವಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮನವಿಯನ್ನು ನಿಪಿ-21, ಸಾಕ್ಷಿ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು.

18. ಸಾಕ್ಷಿಯು ದಿ.01.09.2018 ರಂದು ಮಸೀದಿಯವರಿಗೆ ಆರೋಪಿಯ ವಿವಾಹದ ಬಗ್ಗೆ ಕೊಟ್ಟ

ದೃಢೀಕರಣ ಪತ್ರದಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೃಢೀಕರಣ ಪತ್ರವನ್ನು ನಿಪಿ-22, ಸಾಕ್ಷಿ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

19. ದಿ.01.09.2018 ರಂದು ಮೂಡಿಗೆರೆಯ ಮೊಹಿದ್ದೀನ್ ಜುಮ್ಮಾ ಮಸೀದಿಯಲ್ಲಿ ಮನವಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-23, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

20. ದಿ.01.09.2018 ರಂದು ಮಸೀದಿಯಲ್ಲಿ ವಿವಾಹ ದಾಖಲು ರಿಜಿಸ್ಟರ್ ನ ದೃಢೀಕೃತ ನಕಲಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-24, ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

20. ದಿ.01.09.2018 ರಂದು NC.No.582/2018 ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-25, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

21. ದಿ.01.09.2018 ರಂದು NC.No.228/2018 ನ್ನು ಹಿಂಬರಹದ ಜೊತೆ ನೋಡಿ ಗುರುತಿಸಿದ್ದು, ಅದನ್ನು ನಿಪಿ-26, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

22. ಚಾಸಾ-13 ರವರಿಗೆ ನೀಡಿದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-27, ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು. ಪಿಡಿಒ ರವರಿಂದ ಪಡೆದ ಖಾತಾ ಎಕ್ಸ್ಟ್ರಾಕ್ಟ್ ನ್ನು ನಿಪಿ-28, ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

23. ದಿ.02.08.2018 ರಂದು ಕಾನೂನು ಸೇವಾ ಪ್ರಾಧಿಕಾರ, ಚಿಕ್ಕಮಗಳೂರು ಇವರಿಗೆ ನೀಡಿದ ಮನವಿ ಪತ್ರವನ್ನು ನಿಪಿ-29 ಎಂದು ಗುರುತಿಸಲಾಯಿತು.

24. District Family Welfare, Chikkamagaluru ರವರು ನೀಡಿದ ವರದಿಯನ್ನು ನಿಪಿ-30, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದ:**

1. ನೀವು ಚಾಸಾ-4 ರವರಿಂದ ಯಾವುದೇ ಕಡತವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಬಳಿ ಒಡವೆ ಮತ್ತು ಖರ್ಚಿನ ಬಗ್ಗೆ ಬಿಲ್ ಗಳನ್ನು ಕೇಳಿಲ್ಲ.

2. ಆಟೋ ಖರೀದಿ ಮಾಡಿರುವ ಬಗ್ಗೆ ಏನಾದರು ವಿಚಾರಣೆ ಮಾಡಿದ್ದೀರ ಎಂದರೆ ಇಲ್ಲ.

3. ದಿ.17.09.2018 ರಲ್ಲಿ ಚಾಸಾ-1 ರವರು ಆರೋಪಿ ನೋಟಿಸ್ ಕೊಟ್ಟ ವಿಚಾರ ನನಗೆ ಗೊತ್ತಿಲ್ಲ. ಸದರಿ ನೋಟೀಸ್ ನಲ್ಲಿ ಪುಂಜಾಲಕಟ್ಟೆಯಲ್ಲಿ ವಾಸವಿದ್ದೇನೆ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ.

4. ದಿ.13.06.2018 ರಂದು ಪುಂಜಾಲಕಟ್ಟೆಯಲ್ಲಿ ಹಲ್ಲೆಯಾಗಿರುವ ಬಗ್ಗೆ ದೂರುದಾರರಿಂದ ದಾಖಲೆಗಳನ್ನು ಪಡೆದಿದ್ದೀರ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ದಾಖಲೆಗಳನ್ನು ಪಡೆಯುವ ಪ್ರಯತ್ನ ಪಟ್ಟಿಲ್ಲ.

5. ದಿ.16.07.2018 ರಂದು ಬೆಳ್ತಂಗಡಿ ಸಾಂತ್ವಾನ ಕೇಂದ್ರದಲ್ಲಿ ಆರೋಪಿ ಬರೆದುಕೊಟ್ಟಿರುವ

ಮುಚ್ಚಳಿಕೆ ಪಡೆದಿಲ್ಲ.

6. ಆರೋಪಿ ಬೇರೆಯವರನ್ನು ಮದುವೆಯಾಗಿರುವ ಬಗ್ಗೆ ವಿಚಾರಣೆ ಮಾಡಿದ್ದೀರ ಎಂದರೆ? ಇಲ್ಲ.

7. ಆರೋಪಿಯ ತಾಯಿಗೆ ವಯಸ್ಸಾಗಿರುವ ಬಗ್ಗೆ ವಿಚಾರಣೆ ಮಾಡಿರುತ್ತೇನೆ.

8. ಚಾಸಾ-1 ರವರು ಆರೋಪಿಯು ಅವರ ಜೊತೆ ಹೋಗಿ ಪುಂಜಾಲಕಟ್ಟೆಯಲ್ಲಿ ವಾಸಮಾಡುತ್ತಿಲ್ಲ ಎಂದು ಸುಳ್ಳು ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.

9. ನಿಪಿ-3 ರಿಂದ 17 ರ ದಾಖಲೆಗಳನ್ನು ಈ ಪ್ರಕರಣಕ್ಕೋಸ್ಕರ ಚಾಸಾ-1 ರವರ ಮಾತು ಕೇಳಿ ಸೃಷ್ಟಿಸಿದ್ದೀರ ಎಂದರೆ ಸರಿಯಲ್ಲ.

10. ನಿಪಿ-1 ರಂತೆ ಆರೋಪಿತ ಘಟನೆ ಪುಂಜಾಲಕಟ್ಟೆಯಲ್ಲೇ ನಡೆದಿದೆ ಎಂದು ದೂರಿದ್ದಾರೆ ಎಂದರೆ ಸರಿಯಲ್ಲ.

11. ನಿಪಿ-25 ಮತ್ತು 26 ಪೋಲಿಸ್ ಹಿಂಬರಹಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ್ದೀರ ಎಂದರೆ ಸರಿಯಲ್ಲ.

12. ಆರೋಪಿಯ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರು ಸಹಾ ಆರೋಪಿಯ ವಿರುದ್ಧ ಸುಳ್ಳು ದೋ.ಪ. ಸಲ್ಲಿಸಿದ್ದೀರ ಎಂದರೆ ಸರಿಯಲ್ಲ.

13. ಮಹಜರ್ ಗಳನ್ನು ಠಾಣೆಯಲ್ಲಿಯೇ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

14. ಫೋಟೋಗಳನ್ನು AI ತಂತ್ರಜ್ಞಾನ ಉಪಯೋಗಿಸಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.